ಪೆದ್ದನ ಕಥೆ ! ಗಿಂಡಿಯ ಒಳಗೂ ಇಲ್ಲ, ಅಡಿಯಲ್ಲೂ ಇಲ್ಲ!



✍️ಶ್ರೀವಲ್ಲಿ ರೈ ಮಾರ್ಟೆಲ್

ಹಿಂದಿನ ಕಾಲದಲ್ಲಿ ಒಂದು ಹಿತ್ತಾಳೆಯ ಗಿಂಡಿ ಇತ್ತು. ಅದು ಕೆಳಗೆ ಬೀಳದಂತೆ ನೇರವಾಗಿ ನಿಲ್ಲಲು ಕೆಳಗೆ ಅದಕ್ಕೊಂದು ಕಾಲಿನಂತಹ ಆಧಾರವಿತ್ತು.
ಒಬ್ಬ ವ್ಯಕ್ತಿ ಇದ್ದ, ಅವನಿಗೆ ಬುದ್ಧಿ ಸ್ವಲ್ಪ "ಜಾಸ್ತಿ" (ಅಂದರೆ ಅತೀವ ಪೆದ್ದ). ಒಂದು ದಿನ ಮನೆಯವರು ಅವನಿಗೆ ಒಂದು ಗಿಂಡಿ ಮತ್ತು ಹತ್ತು ರೂಪಾಯಿ ಕೊಟ್ಟು, " ಅಂಗಡಿಗೆ ಹೋಗಿ ಎಣ್ಣೆ ತಗೊಂಡು ಬಾ" ಎಂದು ಕಳುಹಿಸಿದರು.
ಅವನು ಗಿರಿಯಪ್ಪ ಎಂಬುವವರ ಅಂಗಡಿಗೆ ಹೋಗಿ, "ಧಣಿಗಳೇ, ಹತ್ತು ರೂಪಾಯಿಯ ಎಣ್ಣೆ ಕೊಡಿ" ಎಂದನು. ಧಣಿಗಳು ಎಣ್ಣೆಯನ್ನು ಅಳೆದು ಗಿಂಡಿಗೆ ಸುರಿಯುತ್ತಾರೆ. ಆದರೆ ಗಿಂಡಿ ತುಂಬಿ ಇನ್ನು ಸ್ವಲ್ಪ ಎಣ್ಣೆ ಬಾಕಿ ಉಳಿಯುತ್ತದೆ. "ಇದನ್ನು ಎಲ್ಲಿಗೆ ಸುರಿಯಲಿ?" ಎಂದು ಧಣಿಗಳು ಕೇಳುತ್ತಾರೆ.
ಅವಾಗ ಈ "ಬುದ್ಧಿವಂತ" ಗಿಂಡಿಯನ್ನು ಉಲ್ಟಾ ಮಾಡಿ, ಅದರ ಕೆಳಭಾಗವನ್ನು (ಪೀಠವನ್ನು) ತೋರಿಸಿ "ಇಲ್ಲಿ ಸುರಿಯಿರಿ" ಎನ್ನುತ್ತಾನೆ. ಅವನು ಗಿಂಡಿ ತಿರುಗಿಸಿದ ತಕ್ಷಣ ಒಳಗಿದ್ದ ಎಣ್ಣೆಯೆಲ್ಲಾ ಧಣಿಗಳ ಎಣ್ಣೆ ಪಾತ್ರೆಗೇ ವಾಪಸ್ ಬೀಳುತ್ತದೆ!
ಧಣಿಗಳು ಇವನ ಪೆದ್ದತನ ನೋಡಿ ನಗು ತಡೆಯುತ್ತಾ, ಏನೂ ಮಾತನಾಡದೆ ಗಿಂಡಿಯ ಅಡಿಯಲ್ಲಿದ್ದ ಸಣ್ಣ ಗುಳಿಯೊಳಗೆ ಉಳಿದ ಎಣ್ಣೆಯನ್ನು ಸುರಿಯುತ್ತಾರೆ.
ಇವನು ಮನೆಗೆ ಬಂದಾಗ, ಮನೆಯವರು ಗಿಂಡಿಯ ಅಡಿಯಲ್ಲಿರುವ ಸ್ವಲ್ಪ ಎಣ್ಣೆಯನ್ನು ನೋಡಿ ಆಶ್ಚರ್ಯದಿಂದ ಕೇಳುತ್ತಾರೆ, "ಹತ್ತು ರೂಪಾಯಿಗೆ ಇಷ್ಟೇನಾ ಎಣ್ಣೆ?"
ಅದಕ್ಕೆ ಈ ಮಹಾಶಯ, "ಅಯ್ಯೋ ಅಷ್ಟೇ ಅಲ್ಲ, ಗಿಂಡಿಯ ಒಳಗೂ ಇದೆ ನೋಡಿ" ಎನ್ನುತ್ತಾ ಗಿಂಡಿಯನ್ನು ಮತ್ತೆ ಉಲ್ಟಾ ಮಾಡುತ್ತಾನೆ. ಆಗ ಅಡಿಯಲ್ಲಿದ್ದ ಅಲ್ಪ ಸ್ವಲ್ಪ ಎಣ್ಣೆಯೂ ನೆಲದ ಪಾಲಾಗುತ್ತದೆ!
ಇವನ ಅತೀವ ಬುದ್ಧಿವಂತಿಕೆಯಿಂದಾಗಿ ಮನೆಯವರಿಗೆ ಹತ್ತು ರೂಪಾಯಿಯ ಎಣ್ಣೆ ಪೂರ್ತಿ ನಷ್ಟವಾಯಿತು. ಗಿಂಡಿಯ ಒಳಗೂ ಇಲ್ಲ, ಕೆಳಗೂ ಇಲ್ಲ ಎಂಬಂತಾಯಿತು!

ನೀತಿ: ಅತಿಯಾದ ಬುದ್ಧಿವಂತಿಕೆ ಪ್ರದರ್ಶಿಸಲು ಹೋಗಬಾರದು. ಇರುವುದರಲ್ಲೇ ತೃಪ್ತಿ ಪಟ್ಟುಕೊಂಡು ಸಂಭಾಳಿಸುವುದನ್ನು ಕಲಿಯಬೇಕು.